ಬಸಿ ನೀರನ್ನು ತಡೆಗಟ್ಟಲು, ಉಳಿದಿರುವ 45ಮಿ ಉದ್ದದ ನಾಲೆಯ ಭಾಗಕ್ಕೆ ಪಾಲಿಥೀನ್ ಫಿಲ್ಮ್ ಸೇರಿಸಿ ಕಾಂಕ್ರೀಟ್ ಹೊದಿಕೆಯನ್ನು ಹಾಕಲು ಉದ್ದೇಶಿಸಲಾಗಿದೆ. ಈ ಕಾಮಗಾರಿಯನ್ನು ಕಾಲುವೆಯಲ್ಲಿ ನೀರು ಬಿಡುವುದನ್ನು ನಿಲ್ಲಿಸಲು ಉದ್ದೇಶಿಸಲಾಗಿರುವ ದಿನಾಂಕವಾದ ಫೆಬ್ರವರಿ 29ರ ನಂತರ, ತೆಗೆದುಕೊಳ್ಳಲು ಯೋಜಿಸಲಾಗಿದೆ.

ಈ ಭಾಗದಲ್ಲಿ ಬಸಿ ನೀರನ್ನು ತಡೆಗಟ್ಟುವ ಉದ್ದೇಶದಿಂದ ಈಗಾಗಲೇ ಲೈನಿಂಗ್ ಮಾಡಿರುವ ಮುಖ್ಯ ಕಾಲುವೆಯ 400 ಮಿ.ಗಳಷ್ಟು ಉದ್ದಕ್ಕೆ ಕಾಲುವೆಯ ತಳ ಮತ್ತು ಪಾರ್ಶ್ವಕ್ಕೆ, ನೀರು ತಡೆಗಟ್ಟುವ ಮಿಶ್ರಣ (**ವಾಟರ್‌ಪ್ರೂಫ್ ಕಾಂಪೌಂಡ್**) ಕೂಡಿದ ಸಿಮೆಂಟ್ ಪ್ಲಾಸ್ಟರನ್ನು ಹಾಕುವ ಬಗ್ಗೆಯೂ ಯೋಜಿಸಲಾಗುತ್ತಿದೆ.

ಕಾಲುವೆಯಿಂದ ಬಸಿದ ನೀರು ಗ್ರಾಮದೊಳಕ್ಕೆ ಹರಿಯದಂತೆ ಮಾಡಲು, ಮುಖ್ಯ ಕಾಲುವೆಯ ಉದ್ದಕ್ಕೂ ಚರಂಡಿಯನ್ನು ತೋಡಿ ಬಸಿ ನೀರನ್ನು ಪಕ್ಕದ ಹಳ್ಳಕ್ಕೆ ಸೇರಿಸಿದರೆ, ಗ್ರಾಮದ ಮನೆಗಳಿಗೆ ಇದರಿಂದ ಯಾವ ತೊಂದರೆಯೂ ಇರುವುದಿಲ್ಲ ಆದರೆ, ಬೂದಿಹಾಳ ಗ್ರಾಮದ ಜನರು, ಈ ಚರಂಡಿಯನ್ನು ತೋಡಲು ಅವಕಾಶ ಮಾಡಿಕೊಡುತ್ತಿಲ್ಲವೆಂದು ಹೇಳಲಾಗುತ್ತಿದೆ. ತಮ್ಮ ಊರನ್ನೇ ಸ್ಥಳಾಂತರಿಸಬೇಕೆಂದು ಗ್ರಾಮದ ಜನರು ಆಗ್ರಹ ಪಡಿಸುತ್ತಿದ್ದಾರೆಂದು ಹೇಳಲಾಗಿದೆ.

ಮೇಲೆ ತಿಳಿಸಿದ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಬೂದಿಹಾಳ ಗ್ರಾಮಕ್ಕೆ ಬಸಿ ನೀರಿನಿಂದ ಯಾವ ತರಹದ ತೊಂದರೆಯೂ ಆಗುವುದಿಲ್ಲ ಮತ್ತು ಗ್ರಾಮವನ್ನು ಸ್ಥಳಾಂತರಿಸುವ ಪ್ರಶ್ನೆಯೂ ಉದ್ಭವವಾಗುವುದಿಲ್ಲ. ಗ್ರಾಮಸ್ಥರ ಸಹಕಾರದಿಂದ ಶೀಘ್ರದಲ್ಲೇ ಈ ಕ್ರಮಗಳನ್ನು ತೆಗೆದುಕೊಳ್ಳಲು ಇಲಾಖೆಯು ಉದ್ದೇಶಿಸಿದೆ.

ಅಧ್ಯಕ್ಷರೇ, ನಾನು ನೆನ್ನೆಯ ದಿವಸ ಹೇಳಿದಂತೆ ಇದಕ್ಕೆ ಒಂದು ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡುತ್ತೇವೆ. ಕಾಡಾ ಛೇರ್ಮನ್‌ರು ಆದರಲ್ಲಿರುತ್ತಾರೆ, ಮುಖ್ಯ ಇಂಜಿನಿಯರ್, ಡಿವಿಜನಲ್ ಕಮಿಷನರ್, ಜಿಲ್ಲಾಧಿಕಾರಿಗಳವರು ಆ ಸಮಿತಿಯಲ್ಲಿರುತ್ತಾರೆ. ಅವರು ಹೋಗಿ ಸ್ಥಳ ಪರಿಶೀಲನೆ ಮಾಡಲಿಕ್ಕೆ ಆದೇಶ ಕೊಡುತ್ತೇವೆ. ಅವರು ಕೊಟ್ಟ ರಿಪೋರ್ಟಿನ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಮದನಗೋಪಾಲ್ ನಾಯಕ್.— ಮಾನ್ಯ ಅಧ್ಯಕ್ಷರೇ, ಈ ಉತ್ತರದ ಪ್ರಕಾರ ಬೂದಿಹಾಳ್ ಗ್ರಾಮವನ್ನು ಸ್ಥಳಾಂತರಿಸುವ ಅವಕಾಶ ಇಲ್ಲ ಎಂದು ಹೇಳುತ್ತಿದ್ದಾರೆ ಆದರೆ ಪರಿಸ್ಥಿತಿ ಅಲ್ಲಿ ಬಹಳ ಗಂಭೀರವಾಗಿದೆ. ಏಕೆಂದರೆ ಈ ಬೂದಿಹಾಳ್ ಗ್ರಾಮದ ಮೈನ್ ಕೆನಾಲ್ 50 ಅಡಿ ಕೆಳಗಡೆ ಇದೆ. ಪಕ್ಕದಲ್ಲೇ ಹಳ್ಳ ಇದೆ, ಆದ್ದರಿಂದ, ಅಲ್ಲಿ ಮೈನ್ ಕೆನಾಲ್‌ನಿಂದ ನೀರು ಸೋರಿ ಆ ಊರಿನ ಸುತ್ತಮುತ್ತ ತೇವವಾಗಿ ಒಂದು ಅಡಿ ಆಳ ತೋಡಿದರೆ ನೀರು ಬರುತ್ತದೆ. ಅಲ್ಲಿ ಸತ್ತ ಹೆಣವನ್ನು ಹೂಳಬೇಕಾದರೂ ನೀರನ್ನು ಜೆಲ್ಲಿ ಜೆಲ್ಲಿ ಆದರಲ್ಲಿ ಹೂಳಬೇಕಾಗಿದೆ. ಆದ್ದರಿಂದ ಈ ಮೈನ್ ಕೆನಾಲ್ ಮಾಡಿದಂಥ ವ್ಯಕ್ತಿಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದೇ ರೀತಿ ಆದರೆ, ನೀರು ಖಾಲಿ ಮಾಡುವುದರಿಂದ, ಅನಂತರ ಪ್ಲಾಸ್ಟೆರಿಂಗ್ ಮಾಡುವುದರಿಂದ ಸಾಕಷ್ಟು ಹಣ ವ್ಯಯವಾಗುತ್ತದೆ. ಕೋಟಿಗಟ್ಟಲೆ ಹಣ ಖರ್ಚು ಮಾಡಿಧರೂ ಈ ತೊಂದರೆ ಮತ್ತೆ ಉದ್ಭವಿಸಿ ಬಹಳಷ್ಟು ತೊಂದರೆಯಾಗುವ ಪರಿಸ್ಥಿತಿ ಇದೆ. ಆದ್ದರಿಂದ, ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಊರನ್ನೇ ಬೇರೆ ಕಡೆಗೆ ಸ್ಥಳಾಂತರ ಮಾಡಿದರೆ ಬಹಳ ಒಳ್ಳೆಯದು ಎಂದು ನನ್ನ ಅಭಿಪ್ರಾಯ ಇದೆ. ಆದುದರಿಂದ, ಈ ಬಗ್ಗೆ ಮಾನ್ಯ ಮಂತ್ರಿಗಳು ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ.ಎಂ. ನದಾಫ್.— ಆಧ್ಯಕ್ಷರೇ, ನಾನು ಒಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ.

ಆಧ್ಯಕ್ಷರು.— ತಾವು ಕೊಟ್ಟಂತಾದ್ದು ಬ್ಯಾಲೆಟ್‌ನಲ್ಲಿ ಬರಬೇಕು, ಆದು ಬರಲಿಲ್ಲ ಅಂದರೆ ಮಾರನೆಯ ದಿವಸ ಮತ್ತೆ ರಿನ್ಯೂ ಮಾಡಬೇಕು.

6. Announcement

Mr. Speaker.— I have received the recommendation of the Governor for introduction and consideration of the Bill.

7. Legislative Business

(Bills for Introduction)
(Leave to Introduce)

(i) Karnataka Lokayukta Bill, 1984

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರ ಖಾತೆಗಳ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಕರ್ನಾಟಕ ಲೋಕಾಯುಕ್ತ ಮಸೂದೆ 1984ನ್ನು ಮಂಡಿಸಲು ಸಭೆ ಅನುಮತಿಯನ್ನು ಕೋರುತ್ತೇನೆ.

Mr. Speaker.— The question is :

"That leave be granted to introduce the Karnataka Lokayukta Bill, 1984."

The Motion was adopted and leave was granted

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಕರ್ನಾಟಕ ಲೋಕಾಯುಕ್ತ ಮಸೂದೆ 1984ನ್ನು ಮಂಡಿಸುತ್ತೇನೆ.

Mr. Speaker.— The Bill is introduced.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಅಧ್ಯಕ್ಷರೇ, ಈ ಬಿಲ್ ಕನ್ನಡದಲ್ಲಿ ಬಂದಿದೆ. ಆದರೆ ಇದು ಅರ್ಥವೇ ಆಗುವುದಿಲ್ಲ. ಇದನ್ನು ಇಂಗ್ಲಿಷ್‌ನಲ್ಲಿ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.— ಈ ಮಸೂದೆಯನ್ನು ಕನ್ನಡದಲ್ಲಿ ಕೊಟ್ಟಿರುವುದು ನಿಜ. ಆದರೆ ಇಂಗ್ಲೀಷ್‌ನಲ್ಲಿರತಕ್ಕದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡುವಾಗ ಪದಗಳ ರಚನೆ ಮತ್ತು ಸರ್ಕಾರದವರು ಮಾಡಿರತಕ್ಕ ಗ್ಲಾಸರಿ ಆಫ್ ವರ್ಡ್ಸ್ ಏನಿದೆ.... .....

ಅಧ್ಯಕ್ಷರು.— ಇದರ ಬಗ್ಗೆ ತಮ್ಮ ವ್ಯಾಖ್ಯಾನ ಬೇಡ. ವಿಷಯವನ್ನು ಹೇಳಿ

ಶ್ರೀ ಎಂ. ವೀರಪ್ಪ ಮೊಯಿಲಿ.— ಕನ್ನಡದಿಂದ ಆಂಗ್ಲ ಭಾಷೆಗೆ ತರ್ಜುಮೆ ಆಗಬೇಕೇ ಹೊರತು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ತರ್ಜುಮೆ ಮಾಡುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಮಾನ್ಯ ಮಂತ್ರಿಗಳು ಹೇಳಿದಂತೆ ಮೂಲ ಪ್ರತಿ ಆಂಗ್ಲ ಭಾಷೆಯಲ್ಲಿದೆ ಎಂದು ಕಾಣಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಕಾನೂನು ಪ್ರಕಾರ ಆಥರೈಸ್ಡ್ ವರ್ಷನ್ ಕೊಡಬೇಕು. ನಾವು ಘೋಷಣೆ ಮಾಡಿರುವ ಪ್ರಕಾರ ಮಸೂದೆಯನ್ನು ಕನ್ನಡದಲ್ಲಿ ಮಂಡಿಸುತ್ತೇವೆಂದು ಹೇಳಿದ್ದೇವೆ. ಇಂಗ್ಲೀಷ್ ವರ್ಷನ್ ಕೇಳುವುದಾದರೆ ತಮಗೆ ಆದನ್ನು ಕೊಡುತ್ತೇವೆ.....

ANNEXURE

ಶ್ರೀ ಗೋವಿಂದ ಪಿ. ಒಡೆಯರಾಜ್.— ಅವರು ವ್ಯಾಖ್ಯಾನ ಮಾಡುತ್ತಾರೆಂದು ಅಧ್ಯಕ್ಷರೇ ಹೇಳಿದರು. ಈಗ ಇವರನ್ನು ತೆಗೆದು ಅಡ್ವೊಕೇಟ್ ಜನರಲ್ ಆಗಿ ಮಾಡುತ್ತಾರೆಂಬ ಸಂಚು ನಡೆದಿದೆ.....

ಅಧ್ಯಕ್ಷರು.— ಇಲ್ಲಿ ನಿಮ್ಮ ಸಂಚು ಬೇಡ.

Mr. Speaker.— I have received the recommendation from the Governor for the introduction of the Bill, 1984. Karnataka Mineral Rights Tax.

(ii) Karnataka Mineral Rights Tax Bill, 1984.

(Leave to introduce)

ಶ್ರೀ ಎ. ಲಕ್ಷ್ಮೀಸಾಗರ್ — 1984ನೇ ಖನಿಜ ಹಕ್ಕುಗಳ ಮಸೂದೆಯನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

Mr. Speaker.— The question is :

"That leave granted to introduce the Karnataka Mineral Rights Tax Bill, 1984 "

The Motion was adopted and leave was granted

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಕರ್ನಾಟಕ ಮಿನರಲ್ ರೈಟ್ಸ್ ಟ್ಯಾಕ್ಸ್ 1984 ಮಸೂದೆಯನ್ನು ಮಂಡಿಸುತ್ತೇನೆ.

Mr. Speaker — The Bill is introduced.

(iii) Karnataka Agricultural Credit Pass Book Bill, 1984.

(Leave to introduce)